## ಪ್ರಾರ್ಥನೆ

# ಅರ್ಧನಾರೀಶ್ವರ ಸ್ತೋತ್ರಮ್



**ಚಾಂಪೇಯಗೌರಾರ್ಧಶರೀರಕಾಯೈ ಕರ್ಪೂರಗೌರಾರ್ಧಶರೀರಕಾಯ ।**
**ಧಮ್ಮಿಲ್ಲಕಾಯೈ ಚ ಜಟಾಧರಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೧ ॥**

ಸಂಪಿಗೆಯಂಥ ಮೈಕಾಂತಿಯುಳ್ಳ ಪಾರ್ವತಿ, ಕರ್ಪೂರದಂತೆ ಶುಭ್ರದೇಹದ ಶಿವ, ಕೇಶ ರಾಶಿಯಿಂದ ಶೋಭಿಸುವ ಪಾರ್ವತಿ, ಜಟಾಧರನಾದ ಶಿವ ಇಬ್ಬರನ್ನೂ ನಮಸ್ಕರಿಸುತ್ತೇನೆ.

**ಕಸ್ತೂರಿಕಾಕುಂಕುಮಚರ್ಚಿತಾಯೈ ಚಿತಾರಜಃ ಪುಂಜವಿಚರ್ಚಿತಾಯ ।**
**ಕೃತಸ್ಮರಾಯೈ ವಿಕೃತಸ್ಮರಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೨ ॥**

ಕಸ್ತೂರಿ, ಕುಂಕುಮಗಳಿಂದ ಶೋಭಿತಳಾದ ಗೌರಿ, ಚಿತಾಭಸ್ಮದಿಂದ ಲೇಪಿತನಾದ ಶಿವ, ಮನ್ಮಥನಿಗೆ ಜೀವದಾನ ಮಾಡಿದ ಶಿವೆ ಹಾಗೂ ಅವನನ್ನು ಭಸ್ಮ ಮಾಡಿದ ಶಿವನಿಗೆ ನಮಸ್ಕಾರ.

**ಝುಣತ್ಕ್ವಣತ್ಕಂಕಣನೂಪುರಾಯೈ ಪಾದಾಬ್ಜರಾಜತ್ಫಣಿನೂಪುರಾಯ ।**
**ಹೇಮಾಂಗದಾಯೈ ಭುಜಗಾಂಗದಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೩ ॥**

ಝುಣಝುಣಿಸುವ ಕಂಕಣ, ನೂಪುರಗಳಿಂದ ಶೋಭಿಸುವ ಪಾರ್ವತಿ, ತನ್ನ ಪಾದ ಕಮಲ ಗಳಲ್ಲಿ ಸರ್ಪರಾಜನನ್ನೇ ಗೆಜ್ಜೆಯಾಗಿ ಧರಿಸಿರುವ ಶಿವ, ಹೊಂಬಣ್ಣದ ದೇಹಕಾಂತಿಯುಳ್ಳ ಶಿವೆ ಹಾಗೂ ಸರ್ಪದ ಭೂಷಣಗಳಿಂದ ಶೋಭಿಸುವ ದೇಹವುಳ್ಳ ಶಿವ ಇಬ್ಬರನ್ನೂ ನಮಿಸುತ್ತೇನೆ.

**ವಿಶಾಲನೀಲೋತ್ಪಲಲೋಚನಾಯೈ ವಿಕಾಸಿಪಂಕೇರುಹಲೋಚನಾಯ ।**
**ಸಮೇಕ್ಷಣಾಯೈ ವಿಷಮೇಕ್ಷಣಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೪ ॥**

ವಿಶಾಲ ನೀಲನೈದಿಲೆಯಂತಹ ಕಣ್ಣುಗಳುಳ್ಳ ಶಿವೆ, ಅರಳಿದ ಕಮಲದಂತಹ ಕಣ್ಣುಗಳುಳ್ಳ ಶಿವ, ಸಮಾನ ದೃಷ್ಟಿಯುಳ್ಳ ಪಾರ್ವತಿ ಹಾಗೂ ಅಸಮ ದೃಷ್ಟಿ (ವಿರೂಪಾಕ್ಷ) ಯಿಂದ ಕೂಡಿದ ಶಿವ ಇಬ್ಬರನ್ನೂ ನಾನು ನಮಸ್ಕರಿಸುತ್ತೇನೆ.

**ಮಂದಾರಮಾಲಾಕಲಿತಾಲಕಾಯೈ ಕಪಾಲಮಾಲಾಂಕಿತಕಂಧರಾಯ ।**
**ದಿವ್ಯಾಂಬರಾಯೈ ಚ ದಿಗಂಬರಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೫ ॥**

ಮಂದಾರಪುಷ್ಪಗಳ ಮಾಲೆಯನ್ನು ಧರಿಸಿ ಶೋಭಿಸುವ ಕೇಶರಾಶಿಯುಳ್ಳ ಪಾರ್ವತಿ, ಕಪಾಲಗಳ ಮಾಲೆಯಿಂದ ಕೂಡಿರುವ ಶಿವ, ದಿವ್ಯವಾದ ವಸ್ತ್ರಗಳಿಂದ ಶೋಭಿಸುವ ಗೌರಿ ಹಾಗೂ ದಿಗಂಬರನಾದ ಶಿವ – ಇಬ್ಬರನ್ನೂ ನಾನು ನಮಸ್ಕರಿಸುತ್ತೇನೆ.

**ಅಂಭೋಧರಶ್ಯಾಮಲಕುಂತಲಾಯೈ ತಡಿತ್ಪ್ರಭಾತಾಮ್ರಜಟಾಧರಾಯ ।**
**ನಿರೀಶ್ವರಾಯೈ ನಿಖಿಲೇಶ್ವರಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೬ ॥**

ಕಾರ್ಮುಗಿಲಿನಂತೆ ಕಪ್ಪು ಕೇಶರಾಶಿಯುಳ್ಳ ಗೌರಿ, ಮಿಂಚಿನಂತೆ ತಾಮ್ರವರ್ಣದ ಜಟಾ ಜೂಟವುಳ್ಳ ಶಿವ, ನಿರೀಶ್ವರಳಾದ ಶಿವೆ ಹಾಗೂ ಎಲ್ಲದರ ಒಡೆಯನಾದ ಶಿವ – ಇಬ್ಬರನ್ನೂ ನಾನು ನಮಸ್ಕರಿಸುತ್ತೇನೆ.

**ಪ್ರಪಂಚಸೃಷ್ಟ್ಯುನ್ಮುಖಲಾಸ್ಯಕಾಯೈ ಸಮಸ್ತಸಂಹಾರಕತಾಂಡವಾಯ ।**
**ಜಗಜ್ಜನನ್ಯೈ ಜಗದೇಕಪಿತ್ರೇ ನಮಃ ಶಿವಾಯೈ ಚ ನಮಃ ಶಿವಾಯ ॥ ೭ ॥**

ಪ್ರಪಂಚದ ಸೃಷ್ಟಿಯಲ್ಲಿ ಉಲ್ಲಾಸದ ಮುಖವನ್ನು ಹೊಂದಿರುವ ಶಿವೆ, ಸಕಲ ಲೋಕ ವನ್ನೂ ತಾಂಡವನೃತ್ಯದೊಂದಿಗೆ ಸಂಹಾರ ಮಾಡುವ ಶಿವ, ಜಗತ್ತಿನ ಮಾತೆಯಾದ ಶಿವೆ, ಇಡೀ ಜಗತ್ತಿಗೆ ಏಕೈಕ ತಂದೆಯಾದ ಶಿವ – ಇಬ್ಬರನ್ನೂ ನಾನು ನಮಿಸುತ್ತೇನೆ.

**ಪ್ರದೀಪ್ತರತ್ನೋಜ್ಜ್ವಲಕುಂಡಲಾಯೈ ಸ್ಫುರನ್ಮಹಾಪನ್ನಗಭೂಷಣಾಯ ।**
**ಶಿವಾನ್ವಿತಾಯೈ ಚ ಶಿವಾನ್ವಿತಾಯ ನಮಃ ಶಿವಾಯೈ ಚ ನಮಃ ಶಿವಾಯ ॥ ೮ ॥**

ಬೆಳಗುವ ಉಜ್ಜ್ವಲ ರತ್ನಗಳಿಂದ ಕೂಡಿದ ಕುಂಡಲಗಳನ್ನು ಧರಿಸಿದ ಪಾರ್ವತಿ, ಮಹಾ ಸರ್ಪಗಳನ್ನು ಆಭರಣವಾಗಿ ಧರಿಸಿ ಶೋಭಿಸುವ ಶಿವ, ಮಂಗಳಕರ ಗುಣಗಳಿಂದ ಕೂಡಿದ ಶಿವ-ಶಿವೆ ಇಬ್ಬರನ್ನೂ ನಮಿಸುತ್ತೇನೆ.

### ಸೂಕ್ತಿಪ್ರಭ

ಯಾರು ಮತ್ತೊಬ್ಬರ ಹಿತಕ್ಕಾಗಿ ಸದಾ ತನ್ನ ಪ್ರಾಣವನ್ನು ಕೊಡಲು ಸಿದ್ಧನಾಗಿದ್ದನೋ, ಯಾರ ಕೃಪಾದೃಷ್ಟಿ ದೀನರ ಮೇಲೆ ಇರುವುದೋ ಅಂತಹ ನೀಲಕಂಠನನ್ನು ನಮಿಸುತ್ತೇನೆ.

—ಸ್ವಾಮಿ ವಿವೇಕಾನಂದ

ಶಿವನಿಲ್ಲದೆ ಸೌಂದರ್ಯವೆ?
ಶವಮುಖದಾ ಕಣ್ಣೊ!

— ಕುವೆಂಪು

ಶಬ್ದ ಮತ್ತು ಅರ್ಥಗಳಂತೆ ಎಂದಿಗೂ ಅಗಲದಿರುವ, ಜಗತ್ತಿನ ತಾಯಿತಂದೆಯರಾದ ಪಾರ್ವತೀ ಪರಮೇಶ್ವರರನ್ನು ನಮಿಸುತ್ತೇನೆ.

— ಕಾಳಿದಾಸ

ನಟರಾಜನ ನಾಟ್ಯದ ಉದ್ದೇಶ : ಅಸಂಖ್ಯಾತ ಜೀವಗಳನ್ನು ಮಾಯೆಯ ಬಂಧನದಿಂದ ಮುಕ್ತಗೊಳಿಸುವುದು.

—ಆನಂದ ಕುಮಾರಸ್ವಾಮಿ